ದಿನಾಂಕ **01.08.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ

ಬಾಗೂರು ನಲ್ಲಿರುವ ವಾಸದ ಮನೆ ಮೊದಲು ನನ್ನ ಮಾನವನಿಗೆ ಸೇರಿದ್ದು. ನನ್ನ ಮಾವನಿಗೆ ಆ ಮನೆ ಅವರ ತಂದೆಯಿಂದ ಬಂದಿತ್ತು . ಗದ್ದೆ ನನ್ನ ಗಂಡನಿಗೆ ಸೇರಿದ ಆಸ್ತಿ. ನನ್ನ ಗಂಡ ಖರೀದಿಸಿದ್ದಕ್ಕೆ ದಾಖಲೆಗಳು ಇದ್ದವು. ನನ್ನ ಗಂಡ ಮೊದಲು ಗೌರಮ್ಮ ಎಂಬುವವರನ್ನು ಮದುವೆಯಾಗಿದ್ದು ಅವರು ತೀರಿಕೊಂಡ ನಂತರ ನನ್ನನ್ನು ಎರಡನೇ ಮದುವೆಯಾಗಿದ್ದರು. ನನ್ನ ಗಂಡನ ಮೊದಲ ಹೆಂಡತಿಗೆಗೆ ಶಾಂತಕುಮಾರಿ ಮತ್ತು ಶ್ರೀನಿವಾಸ ಎಂಬ ಇಬ್ಬರು ಮಕ್ಕಳು ಇದ್ದರು. ನನ್ನ ಗಂಡನ ಮೊದಲ ಹೆಂಡತಿ ತೀರಿಕೊಂಡು 10 ವರ್ಷದ ನಂತರ ಮದುವೆಯಾಗಿರುತ್ತದೆ. ನನ್ನ ಮದುವೆ ಸಮಯದಲ್ಲಿ ನನ್ನ ಗಂಡನ ಕುಟುಕಬದ ಬಗ್ಗೆ ಸಂಪೂರ್ಣ ಮಾಹಿತಿ ಇರಲಿಲ್ಲ. ನನ್ನ ಮಾವನಿಗೆ ಆಸ್ತಿಗಳು ಅವರ ತಂದೆಯಿಂದ ಬಂದ ಆಸ್ತಿಗಳಾಗಿದ್ದು ಆ ವಿಚಾರ ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಗಂಡ ಮದುವೆಯಾದ ನಂತರ ಬಾಗೂರಿನಲ್ಲಿ ವಾಸವಾಗಿದ್ದೆವು.

ನನ್ನ ಮಕ್ಕಳು ಮತ್ತು ನನ್ನ ಗಂಡನ ಮೊದಲ ಹೆಂಡತಿ ಮಕ್ಕಳು ಎಲ್ಲರೂ ಒಟ್ಟಿಗೆ ವಾಸವಾಗಿದ್ದೆವು. ಸಣ್ಣ ಮಕ್ಕಳಿದ್ದಾಗ ಒಟ್ಟಿಗೆ ಇದ್ದೆವು ನಂತರ ಅವರು ವಿದ್ಯಾಭ್ಯಾಸ ಮಾಡಲು ಹೊರಗೆ ಹೋಗಿರುತ್ತಾರೆ. ಮಕ್ಕಳು 20-22 ವರ್ಷ ಆದ ನಂತರ ಮದುವೆಮಾಡಿಕೊಂಡು ಬೇರೆ ವಾಸ ಹೋಗಿರುತ್ತಾರೆ. ನನ್ನ ಮಗ ರವಿಕುಮಾರ್ ಆರೋಪಿ ವಯಸ್ಸು ಆದ ನಂತರ ಬೇರೆ ವಾಸವಾಗಿರುತ್ತಾನೆ. ರವಿಕುಮಾರ ಹೊರಗಡೆ ಹೋದರೂ ಸಹ ಹೆಣ್ಣುಮಕ್ಕಳನ್ನು ಮದುವೆ ಮಾಡಿ ಮನೆಗೆ ಬಂದು ಹೋಗುತ್ತಿದ್ದ ಎಂದರೆ ಸರಿಯಲ್ಲ. ಊರಿನಲ್ಲಿ ಪೂಜೆ , ಜಾತ್ರೆ ಇರುವಾಗ ನನ್ನ ಎಲ್ಲಾ ಮಕ್ಕಳು ನನ್ನ ಮನೆಗೆ ಬಂದು ಹೋಗುತ್ತಿದ್ದರು ಎಂದರೆ ಸರಿ. ವರ್ಷಕ್ಕೆ ಎರಡು ಸಲ ಎಲ್ಲಾ ಮಕ್ಕಳು ಬಂದು

ಹೋಗುತ್ತಿದ್ದರು ಎಂದರೆ ಸರಿ. ನನ್ನ ಹಳೆಯ ಮನೆ ಮತ್ತು ಗದ್ದೆ ಜಮೀನುಗಳನ್ನು ನನ್ನ ಮಕ್ಕಳು , ನಾನು ನನ್ನ ಗಂಡ ವಿಭಾಗ ಮಾಡಿಕೊಂಡಿಲ್ಲ. ನನ್ನ ಎಲ್ಲಾ ಮಕ್ಕಳು ಒಟ್ಟು ಕುಟುಂಬದಲ್ಲಿ ಇರುತ್ತಿದ್ದರು ಎಂದರೆ ಸರಿಯಲ್ಲ. ಮೊದಲು ನನ್ನ ಮತ್ತು ನನ್ನ ಮಕ್ಕಳ ಹೆಸರು ಮತದಾರರ ಪಟ್ಟಿಯಲ್ಲಿ ಒಟ್ಟಿಗೆ ಇತ್ತು ಎಂದರೆ ಸರಿ. ಮದುವೆಯಾದ ನಂತರ ಎಲ್ಲರೂ ಬೇರೆ ಬೇರೆ ಮಾಡಿಕೊಂಡಿರುತ್ತಾರೆ. ಆದಾಯವನ್ನು ಒಟ್ಟು ಗೂಡಿಸಿ ವ್ಯವಹಾರ ಮಾಡುತ್ತಿದ್ದೆವು ಎಂದರೆ ಸರಿಯಲ್ಲ.

ಮನೆಯನ್ನು ಬಿಟ್ಟು ಬಾಡಿಗೆ ಮನೆಯಲ್ಲಿ ಎಷ್ಟು ವರ್ಷ ಇದ್ದೆವು ಎಂದು ಗೊತ್ತಿಲ್ಲ. ನನ್ನ ಜಮೀನಿನ ಕೆಲಸವನ್ನು ನನ್ನ ಮಕ್ಕಳು ಮಾಡುತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಬರುತ್ತಿದ್ದ ಹೊಟೆಲ್ ಆದಾಯ ಮತ್ತು ಇತರ ಆದಾಯವನ್ನು ಒಟ್ಟಿಗೆ ವ್ಯವಹಾರ ಮಾಡುತ್ತಿದ್ದರು. 10 ಗುಂಟೆ ಜಮೀನನ್ನು ನನ್ನ ಗಂಡ ಮಾರಾಟ ಮಾಡಿರುತ್ತಾರೆ. ಕ್ರಯಪತ್ರಕ್ಕೆ ನನ್ನ ಮಕ್ಕಳು ಸಹಿ ಮಾಡಿಲ್ಲ ನನ್ನ ಗಂಡ ಒಬ್ಬರೇ ಮಾರಾಟ ಮಾಡಿರುತ್ತಾರೆ. ನನ್ನ ಗಂಡ ಆಸ್ತಿಯನ್ನು ಮಾರಾಟ ಮಾಡುವಾಗ ನನ್ನ ಮಗ ರವಿಕುಮಾರ್ಗೆ 10-12 ವರ್ಷ . ನನ್ನ ಮಗ ಸಣ್ಣವನಿದ್ದ ಕಾರಣ ನನ್ನ ಗಂಡ ಮಾರಾಟ ಮಾಡಿದ ಆಸ್ತಿ ಹಣದಿಂದ ಅವನಿಗೆ ಉಪಯೋಗ ಆಗಿಲ್ಲ ಎಂದರೆ ಸರಿ. ಸುಮಾರು 4-5 ವರ್ಷಗಳ ಹಿಂದೆ ಸುಭದ್ರ ಎಂಬುವವರಿಗೆ 32 ಗುಂಟೆ ಮಾರಾಟ ಮಾಡಿರುತ್ತಾರೆ. ಆ ಕ್ರಯದ ಹಣವನ್ನು ರವಿಕುಮಾರ್ಪಡೆದಿಲ್ಲ ಆ ಕ್ರಯಪತ್ರಕ್ಕೆ ರವಿಕುಮಾರ್ ಸಹಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಆಸ್ತಿ ನಿಮ್ಮ ಸ್ವಂತ ಆಸ್ತಿ ಆದ ಕಾರಣ ಮಾರಾಟಮಾಡಿಕೊಳ್ಳಿ ಎಂದು ಹೇಳಿದ್ದರು. ಗಾಯಿತ್ರಿ ಆ ಕ್ರಯಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ಮನೆ ಮತ್ತು ಗದ್ದೆ ಜಮೀನುಗಳು ನನ್ನ ಗಂಡ ತೀರಿಕೊಳ್ಳುವವರೆಗೂ ಅವರ ಹೆಸರಿನಲ್ಲಿ ಇದ್ದವು. ನನ್ನ ಗಂಡ ತನ್ನ ಜೀವಿತಾವಧಿಯಲ್ಲಿ ಆಸ್ತಿಗಳನ್ನು ವಿಲೇವಾರಿ ಮಾಡಿಲ್ಲ ಎಂದರೆ ಸರಿ. ನನ್ನ ಮಕ್ಕಳ ಹೆಸರನ್ನು ಆ ಆಸ್ತಿಗಳನ್ನು ಖಾತೆ ಮಾಡಿಸಿಲ್ಲ

ಎಂದರೆ ಸರಿ. ಆಸ್ತಿಗಳನ್ನು ನಮ್ಮ ಕುಟುಂಬದಲ್ಲಿ ಯಾರ ಹೆಸರಿಗೂ ದಾನ ಮಾಡಿಲ್ಲ ಎಂದರೆ ನನ್ನ ಹೆಸರಿಗೆ ದಾನ ಪತ್ರ ಮಾಡಿರುತ್ತಾರೆ.

ನಾನು ಯಾರ ಹೆಸರಿಗೂ ದಾನ ಪತ್ರ ಮಾಡಿಲ್ಲ ಎಂದರೆ ಸರಿ. ನನ್ನ ಗಂಡ ನನ್ನ ಹೆಸರಿಗೆ ಯಾವುದೇ ದಾನಪತ್ರ ಮಾಡಿಲ್ಲ ಎಂದರೆ ಸರಿಯಲ್ಲ. ದಾನಪತ್ರಕ್ಕೆ ರವಿಕುಮಾರ ಮತ್ತು ಗಾಯಿತ್ರಿ ಸಹಿ ಮಾಡಿಲ್ಲ ಎಂದರೆ ಸರಿ. ನಾಗೇಂದ್ರ , ರವಿಕುಮಾರ್ ಶೈಲಜರವರ ಮನಸ್ತಾಪ ಇತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾದ ಕಾರಣ ವಾದಿಗೆ ಆಸ್ತಿ ಬರಬಾರದು ಎಂದು ನಾನು ನನ್ನ ಗಂಡನ ವಿರುದ್ಧ ದಾನಪತ್ರ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲಲ. ನನಗೂ ನನ್ನ ಹೆಣ್ಣುಮಕ್ಕಳಿಗೂ ಯಾವುದೇ ಮನಸ್ತಾಫ ಇರುವುದಿಲ್ಲ. ದಾವಾ ಸಲ್ಲಿಸಿದ ನಂತರ ನನ್ನ ಹೆಣ್ಣುಮಕ್ಕಳು ನನ್ನ ಮನೆ ಗೆ ಬಂದು ಹೋಗುತ್ತಿಲ್ಲ. ನನ್ನ ಮನೆಯಲ್ಲಿ ಬೆಲೆಬಾಳುವ ಮರಗಳು ಇದ್ದವು ಎಂದರೆಸರಿಯಲ್ಲ. ನನ್ನ ಮನೆಯಲ್ಲಿ ಸಾಕಷ್ಟು ಬೆಲೆಬಾಳುವ ಮರಮುಟ್ಟುಗಳು ಇರುತ್ತವೆ ಎಂದರೆ ಸರಿಯಲ್ಲ. ವಾದಿ ನನ್ನ ಮನೆಯಲ್ಲಿ ವಿಭಾಗ ಮಾಡಿಕೊಂಡು ಹೋಗಿರಲಿಲ್ಲ ಎಂದರೆ ಸರಿ. ನನ್ನ ಮಗ ಕೆಲಸಕ್ಕಾಗಿ ಮತ್ತು ಮಕ್ಕಳನ್ನು ಓದಿಸುವ ಸಲುವಾಗಿ ಹಾಸನಕ್ಕೆ ಹೋದರು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಪಾಲು ಬೇಕು ಎಂದು ವಾದಿ ನನ್ನನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಪಾಲು ನೀಡದ ಕಾರಣ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗನ ಮಗನಿಗೆ ಆಸ್ತಿಗಳ ದಾಖಲೆಗಳನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ನನ್ನನ್ನು ಮತ್ತು ನನ್ನ ಮನೆಯನ್ನು ನೋಡಿಕೊಳ್ಳುತ್ತಿರುವ ಕಾರಣ ಅವನ ಮಗನ ಹೆಸರಿಗೆ ಪತ್ರ ಮಾಡಿಕೊಟ್ಟಿರುತ್ತೇನೆ. ಆ ಪತ್ರವನ್ನು ನುಗ್ಗೇಹಳ್ಳಿ ನೊಂದಣಿ ಕಛೇರಿಯಲ್ಲಿ ಮಾಡಿಕೊಟ್ಟಿರುತ್ತೇನೆ. ಆ ಪತ್ರಕ್ಕೆ ರವಿಕುಮಾರ್ ಶೈಲಜಾ ರವರು ಸಹಿ ಮಾಡಿಲ್ಲ . ದಾವಾ ಆಸ್ತಿಗಳನ್ನು ಸುಳ್ಳಾಗಿ ನಾನು ದಾನಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೂ

ಹಕ್ಕು ಇದ್ದು ಕೊಡಬಾರದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎಲ್ಲರನ್ನು ಕರೆಸಿ ಯಾವುದೇ ವಿಭಾಗ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.